# ಓದಿ, ನಕ್ಕು ಹಗುರಾಗಿ

ನಮಗೆ ನಮ್ಮ ನಮ್ಮ ಹಲ್ಲುಗಳನ್ನು ಸ್ವಚ್ಛ ಮಾಡಿ ರಕ್ಷಿಸಿಕೊಳ್ಳಲು ತಲೆತಲಾಂತರದಿಂದ ಹಲವಾರು ವ್ಯಂಜನಗಳು ಒದಗಿ ಬಂದಿವೆ. ನಾವು ತಿಳಿದ ಹಾಗೆ ಮೊದ ಮೊದಲು ಬೇವಿನ ಕಡ್ಡಿಯಿಂದ, ನಂತರದಲ್ಲಿ ಇದ್ದಿಲಿನಿಂದ ಹಲ್ಲುಜ್ಜಿ, ದಂತಪಂಕ್ತಿಗಳು ಫಳಫಳ ಹೊಳಪನ್ನು ನೀಡುತ್ತಿದ್ದೆವು. ಈಗ ಬಿಡಿ, ಕೋಲ್ ಮೈನ್ಸ್‌ಗಳೆಲ್ಲ ಗೋಲ್ಡ್ ಮೈನ್ಸ್‌ಗಳಾಗಿಬಿಟ್ಟಿವೆ

ನಮ್ಮ ಕಾಲದಲ್ಲಿ, ಎಂದರೆ ಸುಮಾರು ಐವತ್ತು ವರ್ಷಗಳಿಗೂ ಹಿಂದೆ, ಹಲ್ಲು ಪುಡಿಯೇ ನಮ್ಮ ಹಲ್ಲಿನ ಸ್ವಚ್ಛತೆಗೆ ಟೊಂಕ ಕಟ್ಟಿ ಸಣ್ಣ ಪೊಟ್ಟಣಗಳಲ್ಲಿ ದೊರೆಯುತ್ತಿತ್ತು. ಅದರಲ್ಲೂ ಮೈಸೂರು ಭಾಗದವರಾದರೆ 'ನಂಜನಗೂಡು ಸದ್ವೈದ್ಯಶಾಲಾ'ರವರ ತೆಳು ನೇರಳೆ ಬಣ್ಣದ ದಂತ ಚೂರ್ಣಗಳು ನಮ್ಮ ಹಲ್ಲುಗಳನ್ನು ಹೊಳೆಯುವಂತೆ ಮಾಡುತ್ತಿದ್ದವು. ಅದರ ಮುಂದುವರಿದ ಭಾಗವಾಗಿ ನಾವು ಕಂಡದ್ದು, ದಂತ ಮಂಜನ ಅಂದರೆ ಟೂಥ್ ಪೇಸ್ಟ್‌ಗಳನ್ನು. ಈ ಪೇಸ್ಟ್‌ಗಳು, ಹಲ್ಲು ಪುಡಿಯ ಜೊತೆಗೇ ನಮಗೆ ಕ್ರಿಕೆಟ್ ತಂಡದ ಹನ್ನೆರಡನೇ ಆಟಗಾರನಂತೆ ಕಾಣಿಸುತ್ತಿದ್ದವು.

ಫೋರ್ ಹಾನ್ಸ್ ಟೂಥ್ ಪೇಸ್ಟ್ ಕೂಡ ಸ್ವಲ್ಪ ನೇರಳೆ ಮಿಶ್ರಿತ ಬಿಳಿಯದಾಗಿರುತ್ತಿತ್ತು. ಇದರಲ್ಲಿ ಕಂಡಂತಹ ವಿಶೇಷವೆಂದರೆ, ಅದನ್ನು ಬಳಸುವಾಗ ನೊರೆ ಬರುತ್ತಿರಲಿಲ್ಲ. ಇದು ಹಲ್ಲಿನ ಬಿಳುಪಿಗೆ ಯಾವುದೇ ಕುಂದಾಗಿರಲಿಲ್ಲ. ಇದಕ್ಕೆ ಪ್ರತಿಸ್ಪರ್ಧಿಯಾಗಿ ಆಗ ಕಾಣುತ್ತಿದುದು ಬಿನಾಕ ಫ್ಲೋರೈಡ್. ಹಲ್ಲಿಗೆ ತಾಗಿಸುತ್ತಿದ್ದಂತೆ ಹೊಮ್ಮುತ್ತಿದ್ದ ಬುರುಗು ನೊರೆ ಹಲ್ಲುಗಳಿಗೆ ಹೊಸ ಬಿಳುಪು ಮತ್ತು ಹೊಳಪನ್ನು ಕೊಡುತ್ತಿದೆ ಎಂಬ ಭ್ರಮೆ ನೀಡುತ್ತಿತ್ತು. ಇದರ ಹೆಸರನ್ನು ಮಾರುಕಟ್ಟೆಯಲ್ಲಿ ಜೀವಂತವಾಗಿರುವಂತೆ ನೋಡಿಕೊಳ್ಳುತ್ತಿದುದು ಹೆಸರಾಂತ ರೇಡಿಯೊ ಕಲಾವಿದ ಅಮೀನ್ ಸಯ್ಯಾನಿ ಅವರ ಕಂಠಸಿರಿಯಲ್ಲಿ ಮೂಡಿ ಬರುತ್ತಿದ್ದ, 'ಬಿನಾಕಾ ಗೀತ್‌ಮಾಲಾ' ಹೆಸರಿನ ಜನಪ್ರಿಯ ಹಿಂದಿ ಚಲನಚಿತ್ರ ಗೀತೆಗಳ ಕಾರ್ಯಕ್ರಮ. ಇದಕ್ಕೆ ಅಸ್ತಿಭಾರ ಅಂದಿನ 'ರೇಡಿಯೊ ಸಿಲೋನ್'. ಆಗ ದೃಶ್ಯ ಮಾಧ್ಯಮಗಳ ಕಣ್ಣು ಕುಕ್ಕುವಿಕೆ ಇರಲಿಲ್ಲ. ಕಾಲಾಂತರದಲ್ಲಿ ಬಿನಾಕಾ 'ಸಿಬಾಕ' ಆಗಿ ಹೆಸರು ಬದಲಾಯಿಸಿಕೊಂಡಿತು. ಈಗ ಯಾವ ಹೆಸರಿನಲ್ಲಿದೆಯೋ ಅವರೇ ಹೇಳಬೇಕು. ಅದೇ ಪಾಡು ಫೋರ್ ಹಾನ್ಸ್‌ನದು ಕೂಡ.

ಈಗ ಮಾರುಕಟ್ಟೆಯ ತುಂಬ ಹಲವು ಬಗೆಯ, ಅಂದರೆ ಬಗೆ ಬಗೆಯ ಟೂಥ್ ಪೇಸ್ಟ್‌ಗಳಿವೆ. ಎಲ್ಲ ಟೀವಿ ಚಾನೆಲ್‌ಗಳ ಜಾಹೀರಾತು ಸಮಯದಲ್ಲಿ ಇವುಗಳೇ ಹೆಚ್ಚು ಹೊಳೆಯುತ್ತವೆ. ಅವುಗಳ ಉಪಯುಕ್ತತೆಯನ್ನು ಜಾಹೀರಾತಿನಲ್ಲಿ ಭಾಗಿಯಾಗಿರುವ ರೂಪದರ್ಶಿಗಳ ಹಲ್ಲು ಕಿರಿಯುವಿಕೆಯೇ ಜಗಜ್ಜಾಹೀರು ಮಾಡಿಬಿಡುತ್ತದೆ. ಅಲೋಪತಿ, ಆಯುರ್ವೇದ ಎಲ್ಲರದೂ ಅಬ್ಬರದ ಪ್ರಚಾರವೇ. ಒಂದು ಸಂಸ್ಥೆಯಂತೂ ಕೆಲವು ವರ್ಷಗಳ ಹಿಂದೆ 'ತಮ್ಮದು ಶೇ. 100ರಷ್ಟು ಸಸ್ಯಾಹಾರಿ ಪೇಸ್ಟ್' ಎಂದಿತ್ತು. ಇವರು ಹೀಗೆ ಹೇಳಿದಾಗ, ಇದು ಮೊದಲು ಈ ರೀತಿ ಇರಲಿಲ್ಲವೇ ಎಂಬ ಸಂಶಯ ಬಳಸುವವರಿಗೆ



**ಫೋರ್ ಹಾನ್ಸ್ ಟೂಥ್ ಪೇಸ್ಟ್ ಕೂಡ ಸ್ವಲ್ಪ ನೇರಳೆ ಮಿಶ್ರಿತ ಬಿಳಿಯದಾಗಿರುತ್ತಿತ್ತು. ಇದರಲ್ಲಿ ಕಂಡಂತಹ ವಿಶೇಷವೆಂದರೆ, ಅದನ್ನು ಬಳಸುವಾಗ ನೊರೆ ಬರುತ್ತಿರಲಿಲ್ಲ. ಇದು ಹಲ್ಲಿನ ಬಿಳುಪಿಗೆ ಯಾವುದೇ ಕುಂದಾಗಿರಲಿಲ್ಲ. ಇದಕ್ಕೆ ಪ್ರತಿಸ್ಪರ್ಧಿಯಾಗಿ ಆಗ ಕಾಣುತ್ತಿದುದು ಬಿನಾಕ ಫ್ಲೋರೈಡ್ ಹಲ್ಲಿಗೆ ತಾಗಿಸುತ್ತಿದ್ದಂತೆ ಹೊಮ್ಮುತ್ತಿದ್ದ ಬುರುಗು ನೊರೆ ಹಲ್ಲುಗಳಿಗೆ ಹೊಸ ಬಿಳುಪು ಮತ್ತು ಹೊಳಪನ್ನು ಕೊಡುತ್ತಿದೆ ಎಂಬ ಭ್ರಮೆ ನೀಡುತ್ತಿತ್ತು.**

